(*c*) if so, whether they will examine and sanction it early ?

A.—Sri H. M. CHANNABASAPPA (Minister for Public Works and Electricity).—

(*a*) An estimate for Rs. 14,500 was prepared in 1957. It has been revised to Rs. 16,000 on 7th February 1959.

(*b*) Yes, during the rainy season.

(*c*) As the cross drainage work is on a non-P.W.D. road, sanction to it is being considered in the light of general orders of Government regarding construction of bridges and culverts on District Fund and other non-P.W.D. roads across rivers/nallas having a waterway of more than 20 ft.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಸೇತುವೆಯ ಕೆಲಸವಾಗದೆ ಇರುವುದರಿಂದ ಕಳೆದ 3 ವರ್ಷಗಳಿಂದಲೂ ಅರಳೂರು ಕೆರೆಯ ಕೆಲಸ ನಡೆಯಲು ಸಾಧ್ಯವಿಲ್ಲದೆ ಅದು ನಿಂತುಹೋಗಿದೆ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

†Sri M. N. NAGHNOOR (Deputy Minister for Public Works).—That has not come to the notice of Government and that information is not available with me.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಸೇತುವೆ ಕಟ್ಟದೆ ಅರಳೂರು ಕೆರೆಗೆ ಜನರು ಕೆಲಸಮಾಡಲು ಹೋಗುವುದಕ್ಕಾಗುವುದಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri M. N. NAGHNOOR—It has come to the notice of the Government that there is need to construct this project.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಸೇತುವೆಯನ್ನು ಯಾವಾಗ ಕಟ್ಟಿಸುತ್ತೀರಾ ?

Sri M. N. NAGHNOOR.—It may be possible to undertake this work this year.

ಶ್ರೀ ಜಿ. ಎಸ್. ಪುಟ್ಟಣ್ಣ.—ಇಲ್ಲಿ ಸರ್ಕಾರದವರು (c)ಗೆ ಒಂದು ರೀತಿಯಾಗಿ ಉತ್ತರ ಕೊಟ್ಟು ಈಗ ಆ ಕೆಲಸವನ್ನು ಈ ವರ್ಷ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಎರಡು ರೀತಿಯ ಉತ್ತರಗಳಲ್ಲಿ ಸರಿ ಯಾವುದು, ತಪ್ಪು ಯಾವುದು ?

Sri M. N. NAGHNOOR.—The answer is furnished in (c) itself that Government has taken a decision to take up works of culverts with a waterway of more than 20 feet even on roads other than P.W.D. and D.L.B. Roads. The Government has decided to take up such works not covered by P.W.D. by this year.

Sri G. N. PUTTANNA.—The N.E.S in Tumkur has not taken up this question ; the P.W.D. has not taken up this question. It is a very important road. ಈ ಸೇತುವೆ ಆಗದೆ ಅಲ್ಲಿ 10-15 ಗ್ರಾಮಗಳ ಜನಗಳಿಗೆ ತುಂಬಾ ತೊಂದರೆಯಾಗಿದೆ. ಇದು ಬಹು ಮುಖ್ಯವಾದ ಸೇತುವೆ. ಆದುದರಿಂದ ಇದನ್ನು ಸರ್ಕಾರದವರು P.W.D. ಮೂಲಕವಾಗಲೀ N.E.S. ಮೂಲಕವಾಗಲೀ ಕಟ್ಟಿಸಿಕೊಡುತ್ತಾರೆಯೇ?

Sri H. M. CHANNABASAPPA.—It does not need a big argument. The Deputy Minister has specifically made a statement that it may be possible to take it up this year.

Sri G. N. PUTTANNA.—The Deputy Minister has stated that it may be taken up. It will be done ಎಂದು ಹೇಳಿದರೆ ಆಗ ನಾವು ಸುಮ್ಮನಾಗುತ್ತೇವೆ.

Sri H. M. CHANNABASAPPA.—The Deputy Minister has already stated that it may be taken up ; it means that it will be taken up.

Supply of Text Books in time ot the Students of Primary and Middle Schools.

*Q.—207. Smt. LAKSHMIDEVI RAMANNA (Chamarajpet).—

Will the Government be pleased to state :—

the steps that have been taken to provide Text Books in time for students of primary and middle schools during 1960-61 ?

A.—Sri ANNA RAO GANAMUKHI (Minister for Education).—

The existing Text Books on all subjects and for all classes excepting the books for the standards III and IV have been continued for the year 1960-61. New books according to new syllabus for the standards III and IV for the year 1960-61 have been called for, fixing 15th January 1960 as the last date for submission of books to the Office of the D.P.I. After selection and prescription by the Text-Book Committee, the new books will be printed and made available along with all the continued books to the students by the respective authors and publishers latest by 10th May 1960 well before the schools reopen in the third week of May 1960.

As far as Kannada Primary Readers for III and IV standards are concerned the Department has taken action to get them written and published through the Department.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಉತ್ತರದಲ್ಲಿ "1960–61 ನೆಯ ಸಾಲಿಗೆ 3 ಮತ್ತು 4ನೆಯ ಸ್ಟ್ಯಾಂಡರ್ಡಿನ ಪುಸ್ತಕಗಳ ವಿನಾ" ಎಂದು ಹೇಳಿದ್ದೀರಿ. ಹಾಗಿದ್ದರೆ ಈ 3 ಮತ್ತು 4ನೆಯ ತರಗತಿಯ ಪಠ್ಯ ಪುಸ್ತಕಗಳ ಬಗ್ಗೆ ಏನು ಏರ್ಪಾಡು ಮಾಡಿದ್ದೀರಿ?

†ಶ್ರೀ ಅಣ್ಣಾರಾವ್ ಗಣಮುಖಿ.—ಆ ಸ್ಟ್ಯಾಂಡರ್ಡಿನ ಪುಸ್ತಕಗಳನ್ನು ಸಹ ಇಲಾಖೆಯ ಮೂಲಕ ಬರೆಯಿಸಿ ಪ್ರಕಟಿಸಲು ಟೆಕ್ಸ್ಟ್ ಬುಕ್ ಕಮಿಟಿಯವರು ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—1960-61ನೆಯ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪಠ್ಯ ಪುಸ್ತಕಗಳು ಸಕಾಲದಲ್ಲಿ ದೊರೆಯುವ ಹಾಗೆ ಏರ್ಪಾಡು ಮಾಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಬಹಳ ತೀವ್ರವಾಗಿ ಆ ಬಗ್ಗೆ ಈ ಸಾಲಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪಠ್ಯ ಪುಸ್ತಕಗಳು ಅನೇಕ ತಿಂಗಳು ಗಳಾದರೂ ವಿದ್ಯಾರ್ಥಿಗಳಿಗೆ ದೊರೆಯದೆ ಇರುವಾಗ, ಸರ್ಕಾರ ಪಠ್ಯ ಪುಸ್ತಕ ಸಮಿತಿಯವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಹೊರಗಿನವರು ಕೆಲವರು ಆ ಟೆಕ್ಸ್ಟ್ ಬುಕ್ ಕಮಿಟಿಯಲ್ಲಿರುವುದರಿಂದ, ಅವರ ಗಮನವನ್ನು ಆ ಕಡೆಗೆ ಸೆಳೆಯಬೇಕಾಗಿದೆ. ಪಠ್ಯ ಪುಸ್ತಕಗಳು ಸಕಾಲದಲ್ಲಿ ದೊರೆಯದಿರುವುದರಿಂದ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಟೆಕ್ಸ್ಟ್ ಬುಕ್ ಕಮಿಟಿಯವರು ಇಷ್ಟೇ ಅವಧಿಯೊಳಗೆ ತಮ್ಮ ಅಭಿಪ್ರಾಯವನ್ನು ಕೊಡಬೇಕು ಎಂಬುದಾಗಿ ಯಾವ ನಿಯಮವನ್ನು ಹಾಕಿಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಇಂತಿಂತಹ ಪುಸ್ತಕಗಳನ್ನು ಇಂತಿಂತಹ ಕಾಲದಲ್ಲಿ ಸೆಲೆಕ್ಟ್ ಮಾಡಿ ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ನಿರ್ಬಂಧ ವಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಿದ್ದರೂ ಏತಕ್ಕೆ ಡಿಲೇ ಆಗುತ್ತಿದೆ, ಬೇರೆ ಟೆಕ್ಸ್ಟ್ ಬುಕ್ ಕಮಿಟಿಯನ್ನು ರಚನೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಎಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಕೆಲವು ವೇಳೆ ಟೆಕ್ಸ್ಟ್ ಬುಕ್‌ಗಳ ಆಥರ್ಸ್‌ಗಳಿಂದಲೂ ಇತರ ಅನೇಕ ಕಾರಣಗಳಿಂದಲೂ ನಿಧಾನವಾಗುತ್ತದೆ, ಮತ್ತೆ ಪ್ರಿಂಟಿಂಗ್‌ನಿಂದಲೂ ಸ್ವಲ್ಪ ತಡವಾಗುತ್ತದೆ. ಇಪ್ಪೆಲ್ಲ ವನ್ನೂ ಕೂಡ ಆದಷ್ಟು ಮಟ್ಟಿಗೆ ನಿರಿಪಡಿಸಿಕೊಂಡು ತೀವ್ರವಾಗಿ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sri G. SIVAPPA.—Is it a fact that the Text Books, specially for the primary stages, are not supplied in time and if that is so, what are the difficulties that Government are facing?

Sri ANNA RAO GANAMUKHI.—Sometimes a sort of artificial scarcity is created.

Sri F. H. MOHSIN.—Is Government aware that the text books are different in different areas of the State and therefore if Government servants are transferred in mid-term, it gives rise to a number of problems?

Sri ANNA RAO GANAMUKHI.—It may be so.

Sri F. H. MOHSIN.—If so, would Government prescribe uniform text books throughout the State?

Sri ANNA RAO GANAMUKHI.—That is what we are contemplating.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಕಾಲದಲ್ಲಿ ಪುಸ್ತಕಗಳು ದೊರೆಯದಿರುವುದರಿಂದ ಮಕ್ಕಳ ಗತಿಯೇನು?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದು ವೇಳೆ 1-2-3ನೆಯ ಕ್ಲಾಸುಗಳಿಗೆ ಯಾವುದಾದರೂ ಪುಸ್ತಕ ಸಕಾಲದಲ್ಲಿ ಬಾರದಿದ್ದರೆ, ಮೊದಲದ್ದಂಥ ಪುಸ್ತಕದಲ್ಲಿ ಹೆಚ್ಚಿನ ಪೋರ್ಷನ್ ಮಾಡಿ ಹೊಸದರಲ್ಲಿ ಮುಂದೆ ಸ್ವಲ್ಪ ಪಾಠ ತೆಗೆದುಕೊಳ್ಳುತ್ತಾರೆ.

Sri C. J. MUCKANNAPPA.—Is it not a fact that the non-availability of Text Books is the result of political considerations playing a part in the deliberations of the Text-Book Committee?

Sri ANNA RAO GANAMUKHI.—Definitely not.

Sri G. VENKATAI GOWDA.—Is it a fact that new syllabus is being introduced next year in the eighth class and if so what arrangements are being made to prescribe and supply Text Books in good time?

Sri ANNA RAO GANAMUKHI.—Books have been called for.

ಶ್ರೀ ಎ. ಎಂ. ಬಸವೇಗೌಡ.—ಈ ಟೆಕ್ಸ್ಟ್ ಬುಕ್ಕುಗಳನ್ನು ಗವರ್ನ್‌ಮೆಂಟ್ ಪ್ರೆಸ್ಸಿನಲ್ಲಿ ಪ್ರಿಂಟ್ ಮಾಡಿಸಿ ಏಕೆ ಪಬ್ಲಿಷ್ ಮಾಡಬಾರದು?

ಶ್ರೀ ಅಣ್ಣಾರಾವ್ ಗಣಮುಖಿ.—ಅವರಿಗೆ ಈಗ ಅಂಸೆಬ್ಲಿಯ ಕೆಲಸ ವಿಶೇಷವಾಗಿರುವುದರಿಂದ, ಈ ಕೆಲಸ ನಡೆಸಲಕ್ಕಾಗಲಿಲ್ಲ. ಅಲ್ಲಿಂದ ಟೆಂಡರ್ ಕರೆಯುತ್ತಿಲ್ಲ.

Sri G. B. SHANKAR RAO.—Is it a fact that some of the Text Books are prescribed for the primary standards without the Members of the Committee even going through the books?

Sri ANNA RAO GANAMUKHI.—I do not think that would happen. The Steering and the Reviewing Committees go through the books exhaustively and then recommend books.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ಟೆಕ್ಸ್ಟ್‌ಬುಕ್ಸ್ ವಿಷಯದಲ್ಲಿ 10-12 ವರ್ಷಗಳಿಂದ ವಿಶೇಷವಾಗಿ ಬದಲಾವಣೆ ಯಾಗಿರತಕ್ಕದ್ದು, ಅವುಗಳ ರೇಟ್ ವಿಷಯದಲ್ಲಿ ನಾಲ್ಕಾಣೆ ನಿಗದಿ ಮಾಡುವುದಕ್ಕೆ 12 ಆಣೆ ನಿಗದಿ

ಮಾಡುವುದು, ಸಕಾಲಕ್ಕೆ ಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆಯದಿರುವುದು-ಇವನ್ನೆಲ್ಲಾ ನೋಡಿದರೆ ಈಗಿರತಕ್ಕ ಕಮಿಟಿ ಅಷ್ಟು ಎಫಿಷಿಯಂಟಾಗಿ ಕೆಲಸ ಮಾಡುತ್ತಾ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.–ಪುಸ್ತಕಗಳ ಕ್ರಯವನ್ನು ನಿಗದಿ ಮಾಡುವುದಕ್ಕೇ ಬೇರೆ ಒಂದು ಕಮಿಟಿ ಇದೆ. ಅದರಲ್ಲಿ ಈಗಿನ ಸರ್ಕಾರದ ಪ್ರಿಂಟಿಂಗ್ ಪ್ರೆಸ್ ಡೈರೆಕ್ಟರ್, ರಿಟೈರ್ಡ್ ಡೈರೆಕ್ಟರ್ ಇದ್ದಾರೆ; ಇತರರೂ ಇದ್ದಾರೆ. ಇವರೆಲ್ಲರೂ ಚೆನ್ನಾಗಿ ಪರಿಶೀಲನೆ ಮಾಡಿ ಕ್ರಯ ನಿಗದಿ ಮಾಡುತ್ತಾರೆಯೇ ಹೊರತು ಟೆಕ್ಸ್ಟ್ ಬುಕ್ ಕಮಿಟಿಯವರು ಪುಸ್ತಕಗಳ ಕ್ರಯವನ್ನು ನಿಗದಿ ಮಾಡುವುದಿಲ್ಲ. ಇದು ಅವರಿಗೆ ಸಂಬಂಧಿಸಿಲ್ಲ.

ಶ್ರೀ ಎ. ಮಹಮದ್ ಸೇಟ್.—ಈ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡುವುದಕ್ಕೆ ಕೊಟ್ಟ ಕಾಗದಗಳನ್ನು ಬಿಟ್ಟು ಬರಿಯ ಆರ್ಡಿನರಿ ನ್ಯೂಸ್ ಪೇಪರ್ ಅಂತಹ ಕಾಗದದಲ್ಲಿ ಅದನ್ನು ಪ್ರಿಂಟ್ ಮಾಡುವುದಕ್ಕಾಗಿ ಸರ್ಕಾರ ದುಡ್ಡು ಚೆಲ್ಲುತ್ತಿದೆ. ಅದನ್ನು ಏತಕ್ಕೆ ವಿಚಾರ ಮಾಡಲಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಆ ವಿಷಯದಲ್ಲಿ ಈ ಕಡೆಗೆ ಯಾವ ಕಂಪ್ಲೇಂಟ್ ಬಂದಿಲ್ಲ. ಕೆಲವು ಕಡೆ ಯಾವ ಕಾಗದದಲ್ಲಿ ಪ್ರಿಂಟ್ ಮಾಡಿ ಎಂದು ಹೇಳುತ್ತೇವೋ ಆ ರೀತಿ ಮಾಡದೆ ಇರುವ ಸಂದರ್ಭ ಇರಬಹುದು. ಅಂಥಾದ್ದು ರುಜುವಾತಾದರೆ, ಅದಕ್ಕೆ ತಕ್ಕ ಕ್ರಮ ತೆಗೆದುಕೊಂಡು ಅವರ ಕಂಟ್ರಾಕ್ಟನ್ನೇ ವಜಾ ಮಾಡುತ್ತೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಮದ್ರಾಸ್ ಮತ್ತು ಇತರ ಭಾಗಗಳಲ್ಲಿ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡಿಸಲು ಅನೇಕ ವೇಳೆ ತೊಂದರೆಯಾಗಿರುವುದರಿಂದ ಮೈಸೂರು ಸ್ಟೇಟಿನಲ್ಲೇ ಎಲ್ಲಾ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡಿಸಲು ಅವಕಾಶ ಕೊಡುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಟೆಕ್ಸ್ಟ್ ಬುಕ್ ಕಮಿಟಿಯವರು ಟೆಕ್ಸ್ಟ್ ಬುಕ್ ಪ್ರೆಸ್ಸುಗಳ ಒಂದು ಪಟ್ಟಿಯನ್ನು ತಯಾರು ಮಾಡುತ್ತಾರೆ. ಅದೆಲ್ಲವನ್ನೂ ಕೂಲಂಕಷವಾಗಿ ವಿಚಾರಮಾಡಿ ಸರ್ಕಾರದವರು ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೊರಗಡೆಯವರಿಗೆ ಕೊಡುವ ಹಾಗೆ ಮೈಸೂರಿನಲ್ಲಿರುವವರಿಗೆ ಈ ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡುವ ಅವಕಾಶವನ್ನು ಕೊಡುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಈ ವರ್ಷ ಅವರು ಮುಂದೆ ಬಂದರೆ, ಅವಕಾಶ ಕೊಡುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ವರ್ಷ ಅನ್ಯುಯಲ್ ಲೀವ್ ಬರುವುದರೊಳಗಾಗಿ ಸಂಪೂರ್ಣವಾಗಿ ಎಲ್ಲಾ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡುವುದಕ್ಕೆ ಸರ್ಕಾರದವರಿಗೆ ಏನು ಕಷ್ಟವಿದೆ ?

ಶ್ರೀ ಅಣ್ಣಾರಾವ್ ಗಣಮುಖಿ.—ಸ್ಕೂಲ್ ಎಂಡಿಂಗ್ ಇಯರಿಗೆ ಮುಂಚಿತವಾಗಿ ಪಠ್ಯ ಪುಸ್ತಕಗಳನ್ನು ನಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಸ್ಕೂಲ್ ಪ್ರಾರಂಭವಾಗುವುದರೊಳಗಾಗಿ ಪಠ್ಯ ಪುಸ್ತಕಗಳನ್ನು ನಪ್ಲೈ ಮಾಡಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಮಾರ್ಚ್‌ನಲ್ಲಿ ಸಮ್ಮರ್ ವೆಕೇಷನ್ ಷುರುವಾಗಿ ಜೂನ್‌ನಲ್ಲಿ ಸ್ಕೂಲುಗಳು ಪ್ರಾರಂಭವಾಗುವುದರಿಂದ ಅಷ್ಟರೊಳಗೆ ವಿದ್ಯಾರ್ಥಿಗಳು ಪುಸ್ತಕಗಳನ್ನು ಕೊಂಡು ರಜದಲ್ಲಿ ಓದಬಹುದಲ್ಲವೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಮುಂದಿನ ವರ್ಷದಲ್ಲಿ ಕಂಟಿನ್ಯೂ ಆದ ಪುಸ್ತಕಗಳನ್ನು ಬೇಕಾದಷ್ಟು ಕೊಂಡು ಓದಬಹುದು. ಕಂಟಿನ್ಯೂ ಆಗದೇ ಇರತಕ್ಕ ಪುಸ್ತಕಗಳನ್ನು ಸ್ವಲ್ಪ ಬದಲಾಯಿಸಬೇಕಾಗುತ್ತದೆ. ಆಗ ಬೇರೆ ಪುಸ್ತಕಗಳು ಯಾವುದೆಂಬುದನ್ನು ಫೈನಲ್ ಆಗಿ ತೀರ್ಮಾನಮಾಡಿ, ಅವನ್ನು ಪ್ರಿಂಟ್ ಮಾಡಿಸಿ ಅನಂತರ ಅವು ಮಾರ್ಕೆಟ್ಟಿಗೆ ಬರಬೇಕಾದರೆ ಸ್ವಲ್ಪ ತಡವಾಗುತ್ತದೆ. ಆದುದರಿಂದ ಅದು ಸಾಧ್ಯವಿಲ್ಲ.

ಶ್ರೀ ಎಂ. ಲಿಂಗೇಗೌಡ.—ಈ ವ್ಯವಹಾರದಲ್ಲಿ ಟೆಕ್ಸ್ಟ್ ಬುಕ್ ಕಮಿಟಿಯರ ಕೈವಾಡ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೇನೂ ಇಲ್ಲ. ಟೆಕ್ಸ್ಟ್ ಬುಕ್ ಕಮಿಟಿಯವರು ಯಾರೂ ಆ ರೀತಿ ಮಾಡುತ್ತಿಲ್ಲ. ವಿದ್ಯಾಪ್ರಪೀಣರಾದಂತಹವರು ಈ ವ್ಯವಹಾರದ ಬಗ್ಗೆ ಕಮಿಟಿಯ ಸದಸ್ಯರಾರನ್ನೂ ಅಪ್ರೋಚ್ ಮಾಡಬಾರದು ಎಂದು ಡೈರೆಕ್ಟಾಗಿ ಹೇಳಿದೆ. ಯಾರಿಗೂ ಗೊತ್ತಾಗದ ಹಾಗೆ ಕಾರ್ಬನ್ ಪೇಪರಿನಿಯಲ್ಲಾಗಿ ಈ ವ್ಯವಹಾರವನ್ನು ಮಾಡಬೇಕೆಂದು ಸೂಚನೆಯನ್ನು ಸಹ ಕೊಡಲಾಗಿದೆ.

———

Smuggling of Medicine in Civil Hospital, Belgaum.

*Q.—22.. Sri S. P. TALWALKAR (Raibag).—

Will the Government be pleased to state :—

(*a*) whether it is a fact that the medicine is smuggled from the Civil Hospital, Belgaum ;

(*b*) if so ; the action taken by them so far ;

(*c*) whether it is a fact that the Doctors prescribe certain medicines and direct the patients to purchase the same from certain Medical stores ;

(*d*) whether they are aware that the poor patients cannot afford to purchase the costly medicine so prescribed by the Doctors ?

A.—Dr. K. K. HEDGE Minister for Health).—

(*a*) No.

(*b*) Does not arise in view of the reply to clause (*a*) above.

(*c*) No.

(*d*) Yes.

1-30 P.M.

Sri S. P. TALWALKAK.—(Marathi). ಅಧ್ಯಕ್ಷರು.—"ಸ್ಮಗ್ಲಿಂಗು ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದರೆ ಏನು ಮಾಡುತ್ತೀರಿ" ಎಂದು ಅವರು ಪ್ರಶ್ನೆ ಕೇಳಿದರು.

ಅದಕ್ಕೆ ಗಮನ ಕೊಡಲಾಗುತ್ತದೆ ಎಂದು ಉತ್ತರ ಹೇಳಿದರು—ಅಷ್ಟೇ.